**ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು. ದಿನಾಂಕ : 05-09-2023.**

**ಮುಂದುವರೆದ ಪಾಟೀ ಸವಾಲು - ಪ್ರತಿವಾದಿಯ ಪರ ವಕೀಲರಿಂದ :**

**13)** ನಿ.ಪಿ.11 ರ ಪ್ರಕಾರ ಕ್ರಯದ ಕರಾರು ಮತ್ತು ಜಿ.ಪಿ.ಎ. ಯನ್ನು ಪಿ.ಟಿ.ಸಿ.ಎಲ್. ಕಾಯ್ದೆಯಡಿಯಲ್ಲಿ ಅನುಮತಿ ಪಡೆದಿಲ್ಲ ಎಂಬ ಕಾರಣಕ್ಕೆ ರದ್ದು ಮಾಡಲಾಗಿದೆ. 1 ನೇ ಪ್ರತಿವಾದಿ ಪರಿಶಿಷ್ಟ ಪಂಗಡದವರಾಗಿರುವುದರಿಂದ ಅವರಿಗೆ ದಾವಾಸ್ವತ್ತು ಮಂಜೂರು ಆಗಿರುತ್ತದೆ ಎಂದರೆ ಯಾವ ಕಾರಣಕ್ಕೆ ಮಂಜೂರು ಆಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ಅವರಿಗೆ 1965 ರಲ್ಲಿ ಭೂಮಿ ಮಂಜೂರು ಆಗಿರುತ್ತದೆ. ದಾವಾ ಸ್ವತ್ತಿನ ದಕ್ಷಿಣದಲ್ಲಿ ಇರುವ 2 ಮತ್ತು 3 ನೇ ಪ್ರತಿವಾದಿಗಳ ಸ್ವತ್ತಿನ ಸರ್ವೆ ಸಂಖ್ಯೆ 6 ಆಗಿರುತ್ತದೆ. ಸದರಿ ಸ್ವತ್ತನ್ನು 2 ಮತ್ತು 3 ನೇ ಪ್ರತಿವಾದಿಗಳು 1 ನೇ ಪ್ರತಿವಾದಿಯ ತಂದೆಯ ಕಡೆಯಿಂದ ಖರೀದಿಸಿರುತ್ತಾರೆ. ಸದರಿ ಸ್ವತ್ತು 1 ನೇ ಪ್ರತಿವಾದಿಗೆ ಮಂಜೂರು ಆದ ಸ್ವತ್ತು ಅಲ್ಲ. ಸುಮಾರು 15-20 ವರ್ಷಗಳಿಂದ 2 ಮತ್ತು 3 ನೇ ಪ್ರತಿವಾದಿಗಳು ಸದರಿ ಸ್ವತ್ತಿನ ಸ್ವಾಧೀನವನ್ನು ಹೊಂದಿರುತ್ತಾರೆ. ದಾವಾ ಸ್ವತ್ತಿನ ಪೂರ್ವದಲ್ಲಿ ಇರುವ ಸರ್ವೆ ಸಂಖ್ಯೆ 50 ರ ಮಾಲೀಕರು ದೇವರಾಜ್ ಆಗಿರುತ್ತಾರೆ. ದಾವಾ ಸ್ವತ್ತಿನ ಉತ್ತರಕ್ಕೂ ಸಹ ಸದರಿ ದೇವರಾಜ್ ಅವರ ಸ್ವತ್ತು ಇರುತ್ತದೆ. ದಾವಾ ಸ್ವತ್ತಿನ ಪಶ್ಚಿಮಕ್ಕೆ ಮಾಳಮ್ಮ ಮತ್ತು ಅಶ್ವತಮ್ಮ ಅವರ ಸ್ವತ್ತು ಇರುತ್ತದೆ. ದಾವಾ ಸ್ವತ್ತಿನ ಉತ್ತರಕ್ಕೆ ಇರುವ ದೇವರಾಜ್ ಅವರ ಸ್ವತ್ತಿನ ಸರ್ವೆ ಸಂಖ್ಯೆ ನನಗೆ ನೆನಪಿಲ್ಲ. ದಾವಾ ಸ್ವತ್ತಿನ ಪಶ್ಚಿಮಕ್ಕೆ ಇರುವ ಸ್ವತ್ತಿನ ಸರ್ವೆ ಸಂಖ್ಯೆ 51-2 ಆಗಿರುತ್ತದೆ. ದಾವಾ ಸ್ವತ್ತಿನ ಸರ್ವೆ ಸಂಖ್ಯೆ ಯಲ್ಲಿ ಉಳಿಕೆ 1 ಎಕರೆ ಜಮೀನು ದಾವಾ ಸ್ವತ್ತಿನ ಪಶ್ಚಿಮದಲ್ಲಿ ಇದೆ. ಪ್ರತಿವಾದಿಗಳು 2011 ಕ್ಕಿಂತ ಪೂರ್ವದಲ್ಲಿ ನಮಗೆ ತೊಂದರೆ ನೀಡಿದ್ದರೋ ಇಲ್ಲವೋ ಎಂದು ನನಗೆ ಗೊತ್ತಿಲ್ಲ. ದಾವಾ ಸ್ವತ್ತಿನ ಬಗ್ಗೆ ಯಾವುದೇ ಕಂದಾಯ ದಾಖಲೆಗಳನ್ನು ನಮ್ಮ ಹೆಸರಿಗೆ ಮಾಡಿಸಿಕೊಂಡಿರುವುದಿಲ್ಲ. ಖರೀದಿ ಮಾಡಿದಾಗಿನಿಂದ ಮಾಡಿಸಿಕೊಂಡಿರುವುದಿಲ್ಲ. ಸರ್ವೆ ಸಂಖ್ಯೆ 6 ಸರ್ವೆ ಸಂಖ್ಯೆ 51 ಆಗಿ ಯಾವಾಗ ಬದಲಾವಣೆ ಆಗಿರುತ್ತದೆ ಎಂದು ನನಗೆ ಇಸವಿ ಗೊತ್ತಿಲ್ಲ. 1 ನೇ ಪ್ರತಿವಾದಿ ಹೆಸರಿನಲ್ಲಿ ಪಹಣಿ ಪತ್ರಿಕೆ ಇರುವ ಬಗ್ಗೆ 2011 ರಲ್ಲಿ

ಅವರು ಜಮೀನನ್ನು ಅಳತೆ ಮಾಡಿಸಲು ಬಂದಾಗ ನನಗೆ ಗೊತ್ತಾಯಿತು. ನನಗೆ ತಿಂಗಳು ಮತ್ತು ದಿನಾಂಕವನ್ನು ಹೇಳಲು ಬರುವುದಿಲ್ಲ. ಅವರ ಹೆಸರಿನಲ್ಲಿ ಇರುವ ಪಹಣಿ ಪತ್ರಿಕೆಯನ್ನು ರದ್ದುಗೊಳಿಸಲು ನಾನು ಉಪವಿಭಾಗಾಧಿಕಾರಿಗಳಿಗೆ ಮೇಲ್ಮನವಿ ಸಲ್ಲಿಸಿದ್ದು ಸದರಿ ಮೇಲ್ಮನವಿಯ ಅರ್ಜಿಯ ಪ್ರತಿಯನ್ನು ನೋಡುತ್ತಿದ್ದು, ಅದನ್ನು ಒಪ್ಪಿಕೊಂಡು **ನಿ.ಡಿ.1** ಎಂದು ಗುರುತಿಸಲಾಯಿತು. ನಿ.ಡಿ.1 ರಲ್ಲಿ ನಮ್ಮ ತಾತ ಮರಿಯಪ್ಪ ಅವರಿಂದ 1 ಎಕರೆ ಖರೀದಿಸಿ ಅದೇ ದಿನ ಇನ್ನೊಂದು ಎಕರೆಯನ್ನೂ ಸಹ ಖರೀದಿಸಿರುತ್ತಾರೆ ಎಂದು ಹೇಳಿರುತ್ತೇನೆ ಎಂದರೆ ಸರಿ. ಸದರಿ 2 ನೇ ಎಕರೆ ಜಮೀನನ್ನು ಖರೀದಿಸಿದ ಬಗ್ಗೆ ನನ್ನ ಬಳಿ ಕ್ರಯಪತ್ರ ಇದೆ. ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ಯಾವುದೇ ತೊಂದರೆ ಇಲ್ಲ. ಸದರಿ ಮೇಲ್ಮನವಿಯಲ್ಲಿ 2 ಎಕರೆ ಜಮೀನುಗಳ ಪ್ರತ್ಯೇಕ ಕ್ರಯಪತ್ರಗಳನ್ನು ಹಾಜರುಪಡಿಸಿರುತ್ತೇನೆ. ಮರಿಯಪ್ಪನವರಿಗೆ ಸೇರಿದ ಸದರಿ 2 ಎಕರೆಯ ಹೊರತಾಗಿ ಇನ್ನೊಂದು ಎಕರೆ ಇದೇ ಸರ್ವೆ ಸಂಖ್ಯೆಯಲ್ಲಿ ಇದೆ. ಸದರಿ ಜಮೀನು ಮರಿಯಪ್ಪನವರಿಗೆ ಮಂಜೂರು ಆಗಿತ್ತು. ಮರಿಯಪ್ಪ ಅವರಿಗೆ ಎಷ್ಟು ಎಕರೆ ಜಮೀನು ಮಂಜೂರು ಆಗಿತ್ತು ಎಂದು ನನಗೆ ಗೊತ್ತಿಲ್ಲ. ನಿ.ಪಿ.3 ರ ಮೂಲ ದಾಖಲೆ ನಮ್ಮ ಬಳಿ ಇದೆ, ಅದನ್ನು ನಾವು ಉದ್ದೇಶಪೂರ್ವಕವಾಗಿ ಹಾಜರುಪಡಿಸುತ್ತಿಲ್ಲ ಎಂದರೆ ಸರಿ. ನಮ್ಮ ತಾತ ಸಿದ್ದಪ್ಪ ಮರಿಯಪ್ಪ ಅವರ ಮರಣದ ನಂತರ ಅವರ ಪತ್ನಿ ಮಾಳಮ್ಮ ಮತ್ತು ಮಾಳಮ್ಮ ಅವರ ಭಾವ ಅಪ್ಪಯ್ಯಣ್ಣ ಅವರಿಂದ ದಾವಾ ಸ್ವತ್ತನ್ನು ಖರೀದಿಸಿರುತ್ತಾರೆ. ಮರಿಯಪ್ಪ ಅವರಿಗೆ ಎಷ್ಟು ಜನ ವಾರಸುದಾರರು ಎಂದು ನನಗೆ ಗೊತ್ತಿಲ್ಲ. ಸಿದ್ದಪ್ಪ ಅವರು ಮಾಳಮ್ಮ ಅವರಿಗೆ ಕ್ರಯದ ಮೊಬಲಗು ನೀಡಿರುವ ಬಗ್ಗೆ ರಶೀದಿ ಇತ್ಯಾದಿ ಇಲ್ಲ, ಆದರೆ ಹಣ ನೀಡಿರುತ್ತಾರೆ. ಸಿದ್ದಪ್ಪ ಅವರಿಗೆ ಯಾವುದೇ ಆದಾಯ ಇರಲಿಲ್ಲ, ದಾವಾ ಸ್ವತ್ತನ್ನು ಖರೀದಿಸಲು ಹಣ ಇರಲಿಲ್ಲ ಹಾಗೂ ಅವರು ಮಾಳಮ್ಮ ಅವರಿಗೆ ಯಾವುದೇ ಹಣ ನೀಡಿಲ್ಲ ಎಂದರೆ ಸರಿಯಲ್ಲ. ನಾವು ದಾವಾ ಸ್ವತ್ತಿನ ಅನುಭೋಗದಲ್ಲಿ ಇಲ್ಲ ಹಾಗೂ ಯಾವುದೇ ಬೆಳೆ ಬೆಳೆಯುತ್ತಿಲ್ಲ ಎಂದರೆ ಸರಿಯಲ್ಲ. ಮರಿಯಪ್ಪ ಅವರು ಯಾವತ್ತೂ ದಾವಾ ಸ್ವತ್ತಿನ ಅನುಭೋಗದಲ್ಲಿ ಇರಲಿಲ್ಲ ಎಂದರೆ ನನಗೆ ಗೊತ್ತಿಲ್ಲ. ನಾವು 2011 ನೇ ಇಸವಿಯಲ್ಲಿ 1 ನೇ ಪ್ರತಿವಾದಿ ವಿರುದ್ಧ

ಪೊಲೀಸ್ ದೂರು ನೀಡಿರುತ್ತೇವೆ. ಸದರಿ ದೂರನ್ನು ಹಾಜರುಪಡಿಸಲು ಯಾವುದೇ ತೊಂದರೆ ಇಲ್ಲ. ಸಿದ್ದಪ್ಪ ಅವರ ಹೆಣ್ಣು ಮಕ್ಕಳು ಮದುವೆಯಾಗಿ ಬಹಳ ವರ್ಷ ಆಗಿರುವುದರಿಂದ ಅವನ್ನು ನಿ.ಪಿ.2 ರಲ್ಲಿ ತೋರಿಸಿರುವುದಿಲ್ಲ. ಇಬ್ಬರು ಹೆಣ್ಣು ಮಕ್ಕಳಲ್ಲಿ ಶಾಂತಮ್ಮ ಎನ್ನುವವರು ಪೌತಿಯಾಗಿದ್ದಾರೆ, ಚಿಕ್ಕತಾಯಮ್ಮ ಎನ್ನುವವರು ಇವತ್ತಿಗೂ ಜೀವಂತ ಇದ್ದಾರೆ. ಶಾಂತಮ್ಮ ಅವರು ಯಾವ ವರ್ಷ ಪೌತಿಯಾದರು ಎಂದು ನನಗೆ ಗೊತ್ತಿಲ್ಲ. ಪೌತಿಯಾಗಿ 10 ವರ್ಷಕ್ಕಿಂತ ಹೆಚ್ಚು ಅವಧಿಯಾಗಿರುತ್ತದೆ. ನಾವು ಜಮೀನು ಮಾರಿದಾಗ ಹಣವನ್ನು ನ್ಯಾಯಾಲಯದ ಮುಖಾಂತರ ಶಾಂತಮ್ಮ ಮತ್ತು ಚಿಕ್ಕತಾಯಮ್ಮ ಅವರಿಗೆ ನೀಡಿರುತ್ತೇವೆ. ಸದರಿ ನ್ಯಾಯಾಲಯದ ಪ್ರಕರಣದ ಸಂಖ್ಯೆ ಇತ್ಯರ್ಥವಾದ ದಿನಾಂಕ ಇತ್ಯಾದಿ ಹೇಳಲು ಬರುವುದಿಲ್ಲ. ಸದರಿ ದಾವೆಯನ್ನು ಪಾಲು ಕೇಳಿ ಶಾಂತಮ್ಮ ಮತ್ತು ಚಿಕ್ಕತಾಯಮ್ಮ ದಾಖಲಿಸಿದ್ದರು. ಈ ದಾವಾ ಸ್ವತ್ತು ಸದರಿ ದಾವೆಯಲ್ಲಿ ದಾವಾ ಸ್ವತ್ತು ಆಗಿರಲಿಲ್ಲ. ಸದರಿ ದಾವೆಗೆ ಸಂಬಂಧಿಸಿದ ದಾಖಲೆಗಳು ಯಾರ ಬಳಿ ಇವೆ ಎಂದು ನನಗೆ ಗೊತ್ತಿಲ್ಲ. ನಮ್ಮ ತಂದೆ ವ್ಯವಸಾಯ ಮಾಡುತ್ತಿದ್ದರು. ರಾಗಿ ಬೆಳೆಸುತ್ತಿದ್ದರು, ಮಾರಾಟ ಮಾಡುತ್ತಿದ್ದರೋ ಎಂದು ನನಗೆ ಗೊತ್ತಿಲ್ಲ. ರೇಷ್ಮೆ ಬೆಳೆಸುತ್ತಿದ್ದರು. ಈವತ್ತಿಗೂ 1 ನೇ ಪ್ರತಿವಾದಿಯ ಕುಟುಂಬದವರು ದಾವಾ ಸ್ವತ್ತಿನ ಅನುಭೋಗದಲ್ಲಿ ಇದ್ದಾರೆ ಎಂದರೆ ಸರಿಯಲ್ಲ. ಈವತ್ತಿಗೂ ಅವರೇ ದಾವಾ ಸ್ವತ್ತಿನ ಮಾಲೀಕರು ಎಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷಿ ನೀಡುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ - ಇಲ್ಲಾ.**

(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).

ಓ. ಹೇ.ಕೇ.ಸ.ಇ. ಎಂದು ಒಪ್ಪಿಕೊಂಡಿರುತ್ತಾರೆ,

Sd./-
**ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ.,**
**ದೇವನಹಳ್ಳಿ.**